2017 ಕ.ತೀ.ವ. 519

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಅಶೋಕ್ ಬಿ. ಹಿಂಚಿಗೇರಿ

## ಕೊರಂಗ್ರಪಾಡಿ ಸಹಕಾರಿ ಕೃಷಿ ಸೊಸೈಟಿ ನಿಯಮಿತ ಮತ್ತು ಇತರರು –ವಿರುದ್ಧ– ಕೇಂದ್ರ ಸರ್ಕಾರದ ಕಾರ್ಯದರ್ಶಿ ಮತ್ತು ಇತರರು*

**ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.**

**ಅಪಮೌಲ್ಯೀಕರಣದ ಯೋಜನೆಯಡಿಯಲ್ಲಿ ಎದುರುದಾರರು ಖಾತೆಗಳಿಂದ ಹಣದ ಮೊತ್ತದ ಮರುಪಾವತಿಗೆ ವಿಧಿಸಿರುವ ನಿರ್ಬಂಧದ ಕ್ರಮವನ್ನು ಪ್ರಶ್ನಿಸಿ ಸದರಿ ಅರ್ಜಿಯನ್ನು ಸಲ್ಲಿಸಲಾಗಿದೆ.**

**ಆಡಳಿತಾಧಿಕಾರಿಗಳು ಮತ್ತು ಶಾಸಕರು ಸಾರ್ವಜನಿಕ ಹಿತಾಸಕ್ತಿಗಾಗಿ ನಿಯಮಾವಳಿಗಳನ್ನು ಸೃಷ್ಟಿಸಬಹುದಾಗಿದ್ದು ಅಂತಹ ನಿರ್ಧಾರಗಳಲ್ಲಿ ನ್ಯಾಯಾಲಯಗಳು ಹಸ್ತಕ್ಷೇಪ ಮಾಡಲಾಗದು ಎಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಗಳನ್ನು ವಜಾಗೊಳಿಸಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು:*** ***ಪ್ಯಾರಾಗಳಲ್ಲಿ***

*1. (2004) 1 ಸ.ನ್ಯಾ.ಮೊ. 712*
*ಧರಮ್‌ದುತ್ ಮತ್ತು ಇತರರು –ವಿರುದ್ಧ–*
*ಕೇಂದ್ರ ಸರ್ಕಾರ ಮತ್ತು ಇತರರು* *(ಉಲ್ಲೇ) 4*

---

* ರಿಟ್ ಅರ್ಜಿ ಸಂಖ್ಯೆಗಳು 61428–61432/2016 ಹಾಗೂ ಇದರೊಂದಿಗೆ ಇತರೆ (ಜಿಎಂ.ಆರ್.ಇ.ಎಸ್.), ದಿನಾಂಕ: 6ನೇ ಡಿಸೆಂಬರ್, 2016.

2. *(2011) 8 ಸ.ನ್ಯಾ.ಮೊ. 1*
*ರಾಮ್ ಜೇಠ್‌ಮಲಾನಿ ಮತ್ತು ಇತರರು*
*–ವಿರುದ್ಧ– ಕೇಂದ್ರ ಸರ್ಕಾರ ಮತ್ತು ಇತರರು (ಉಲ್ಲೇ) 9*

3. *(2011) 1 ಎಸ್‌ಸಿಸಿ 640*
*ಬಜಾಜ್ ಹಿಂದೂಸ್ತಾನ್ ಲಿಮಿಟೆಡ್*
*–ವಿರುದ್ಧ– ಶ್ರೀ ಶಾದಿ ಲಾಲ್ ಎಂಟರ್‌ಪ್ರೈಸಸ್ ಲಿಮಿಟೆಡ್*
*ಮತ್ತು ಮತ್ತೊಬ್ಬರು (ಉಲ್ಲೇ) 10*

4. *(2002)2 ಎಸ್‌ಸಿಸಿ 333*
*ಬಾಲ್ಕೋ ನೌಕರರ ಒಕ್ಕೂಟ (ನೋಂದಣಿ) –ವಿರುದ್ಧ–*
*ಕೇಂದ್ರ ಸರ್ಕಾರ ಮತ್ತು ಇತರರು (ಉಲ್ಲೇ) 16*

5. *1990(4) ಎಸ್‌ಸಿಸಿ 356*
*ಇಂಡಿಯಾ ಸಿಮೆಂಟ್ ಲಿಮಿಟೆಡ್ ಮತ್ತು ಇತರರು*
*–ವಿರುದ್ಧ– ಕೇಂದ್ರ ಸರ್ಕಾರ*
*ಮತ್ತು ಇತರರು (ಉಲ್ಲೇ) 17*

6. *(2014) 4 ಎಸ್‌ಸಿಸಿ 156*
*ಪಠಾನ್ ಮೊಹಮ್ಮದ್ ಸುಲೇಮಾನ್ ರೆಹಮತ್‌ಖಾನ್*
*–ವಿರುದ್ಧ– ಗುಜರಾತ್ ಸರ್ಕಾರ ಮತ್ತು ಇತರರು (ಉಲ್ಲೇ) 19*

ಅರ್ಜಿದಾರರ ಪರ : ಪ್ರೊ. ರವಿವರ್ಮ ಕುಮಾರ್, ಹಿರಿಯ ವಕೀಲರು.
ಶ್ರೀ ಮಹೇಶ್ ಆರ್ ಉಪ್ಪೀನ್, ವಕೀಲರ ಪರವಾಗಿ;
1ನೇ ಎದುರುದಾರರ ಪರ: ಶ್ರೀ ಪ್ರಭುಲಿಂಗ ಕೆ. ನಾವಡಗಿ, ಹೆಚ್ಚುವರಿ ಸಾಲಿಸಿಟರ್ ಜನರಲ್ ಮತ್ತು ಶ್ರೀಮತಿ ಅನುಪಮಾ ಹೆಗ್ಗಡೆ, ಸಿ.ಜಿ.ಸಿ.;
2ನೇ ಎದುರುದಾರರ ಪರ : ಮೆ॥ ಕಿಂಗ್ ಅಂಡ್ ಪಾರ್ಟ್‌ರಿಡ್ಜ್ ;
3ನೇ ಪ್ರತ್ಯರ್ಜಿದಾರರು : ನೋಟೀಸು ಜಾರಿ ಮಾಡಲಾಗಿದೆ.

80

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಅಶೋಕ್ ಬಿ. ಹಿಂಚಿಗೇರಿ:**

ಕರ್ನಾಟಕ ಸಹಕಾರಿ ಸೊಸೈಟಿಗಳ ಅಧಿನಿಯಮ, 1959ರ ಮೇರೆಗೆ ನೋಂದಾಯಿತವಾದ ಎಲ್ಲ ಕೃಷಿಕರ/ಮೀನುಗಾರರ/ಬಹು ಉದ್ದೇಶಿತ/ಕ್ರೆಡಿಟ್ ಸಹಕಾರಿ ಸೊಸೈಟಿಗಳು ಇಲ್ಲಿನ ಅರ್ಜಿದಾರರಾಗಿರುವರು. ದಿನಾಂಕ 8.11.2016 (ಅನುಬಂಧ–ಎ)ರ ಅಧಿಸೂಚನೆಯಂತೆ ನೋಟುಗಳ ಅಮಾನ್ಯೀಕರಣದ ಯೋಜನೆಗೆ ಅನುಸರಣೆಯಲ್ಲಿ ಪ್ರತಿವಾದಿಗಳಾದ ಸಂಖ್ಯೆ 1 ಮತ್ತು 2ರ ಮೂಲಕ ನಗದು ಹಿಂಪಡೆಯಲು ನಿಗದಿಪಡಿಸಿರುವ ಮೊಬಲಗಿನ ಮೇಲೆ ತಮ್ಮ ಕುಂದುಕೊರತೆಗಳನ್ನು ಪರಿಹರಿಸಲು ಕೋರಿ ಅರ್ಜಿದಾರರು ಅರ್ಜಿಗಳನ್ನು ದಾಖಲಿಸಿದ್ದಾರೆ.

2. ಭಾರತ ಸಂವಿಧಾನದ 360ನೇ ಅನುಚ್ಛೇದದ ಮೇರೆಗೆ ತುರ್ತು ಹಣಕಾಸು ಪರಿಸ್ಥಿತಿಯ ಉದ್ಘೋಷಣೆಯ ಗೈರು ಹಾಜರಿಯಲ್ಲಿ ಆಕ್ಷೇಪಿತ ಅಧಿಸೂಚನೆಯನ್ನು ಜಾರಿ ಮಾಡದಂತೆ ನಿರ್ಬಂಧನೆಯನ್ನು ವಿಧಿಸುವ ಸಲುವಾಗಿ ಸಲ್ಲಿಸಿದ ಅರ್ಜಿಗಳ ಅರ್ಜಿದಾರರ ಪರವಾಗಿ ಪ್ರೊ. ರವಿವರ್ಮಕುಮಾರ್, ಮಾನ್ಯ ಹಿರಿಯ ನ್ಯಾಯವಾದಿಗಳು ಇವರು ಶ್ರೀ ಮಹೇಶ್ ಆರ್. ಉಪ್ಪಿನ್ ಇವರ ಪರವಾಗಿ ಹಾಜರಾಗಿರುವರು. ಬ್ಯಾಂಕಿನಲ್ಲಿನ ಅವನ/ಅವಳ/ ಅವರ ಖಾತೆಗಳಿಂದ ಒಬ್ಬ ಗ್ರಾಹಕ ಪ್ರತಿವಾರಕ್ಕೆ 24,000/– ರೂಪಾಯಿಗಳಿಗಿಂತ ಹೆಚ್ಚಿನ ಹಣವನ್ನು ಹಿಂಪಡೆಯಲು ನಿರ್ಬಂಧಿಸಿರುವುದನ್ನು ಯಾವುದೇ ಶಾಸನನಬದ್ಧ ಉಪಬಂಧದಲ್ಲಿ ಪತ್ತೆ ಮಾಡಲು ಸಾಧ್ಯವಾಗದಿರುವುದು.

3. ಭಾರತದಲ್ಲಿ ರಾಷ್ಟ್ರೀಯ ಆರ್ಥಿಕತೆಯಲ್ಲಿ ಹೇಗೆ ಸಹಕಾರಿ ವಲಯವು ವಹಿಸಿರುವಂತಹ ತನ್ನದೇ ಪ್ರಮುಖವಾದ ಪಾತ್ರವನ್ನು ಹಾಗೂ ಭಾರತದಲ್ಲಿ ಸುಮಾರು 29.7 ಕೋಟಿ ಜನರು ಸಹಕಾರಿ ಸೊಸೈಟಿಗಳ ಸದಸ್ಯರಾಗಿರುವ ಬಗ್ಗೆ

ಮಾನ್ಯ ಹಿರಿಯ ನ್ಯಾಯವಾದಿಗಳು ನಿವೇದಿಸಿರುತ್ತಾರೆ. ಭಾರತದಲ್ಲಿ ಸುಮಾರು 93,000 ಸಹಕಾರಿ ಸೊಸೈಟಿಗಳಿವೆ ಎಂಬ ಮಾಹಿತಿಯನ್ನು ಸಹಾ ನಿವೇದಿಸಿದ್ದಾರೆ. ಸಹಕಾರಿ ಸೊಸೈಟಿಗಳು ಅದರ ಸದಸ್ಯರುಗಳಿಂದ ರಚಿತವಾಗಿದೆ. ಅವರ ಒಡೆತನದಲ್ಲಿದೆ ಮತ್ತು ಅವರ ನಿಯಂತ್ರಣದಲ್ಲಿವೆ. ಸಹಕಾರಿ ಸೊಸೈಟಿಗಳು ನೀಡಿದ ಗಮನಾರ್ಹ ಕೊಡುಗೆಗಳನ್ನು ಮತ್ತು ರಾಷ್ಟ್ರೀಯ ಆರ್ಥಿಕತೆಯಲ್ಲಿ ಅವುಗಳು ನಿರ್ವಹಿಸಿರುವ ಪ್ರಮುಖ ಪಾತ್ರಗಳನ್ನು ಗುರುತಿಸಿ ಸಂಸತ್ತು ಸಂವಿಧಾನದ (ತೊಂಬತ್ತೇಳನೇ ತಿದ್ದುಪಡಿ) ಅಧಿನಿಯಮ, 2011ಅನ್ನು ಅಧಿನಿಯಮಿಸುವ ಮೂಲಕ ಸಹಕಾರಿ ಸೊಸೈಟಿಗಳಿಗೆ ಸಂವಿಧಾನಾತ್ಮಕ ಸ್ಥಾನಮಾನವನ್ನು ಪ್ರದತ್ತಗೊಳಿಸಿದೆ. ಸಂವಿಧಾನದ ಭಾಗ–3 ರಲ್ಲಿನ ಅನುಚ್ಛೇದ 19(1)(ಸಿ)ಯನ್ನು ತಿದ್ದುಪಡಿ ಮಾಡುವ ಮೂಲಕ ಸಹಕಾರಿ ಸಂಘದ ರಚನೆ ಮಾಡುವುದು ನಾಗರೀಕರ ಮೂಲಭೂತ ಹಕ್ಕಾಗಿಸಿದೆ. ಭಾರತದಲ್ಲಿ ಸಹಕಾರಿ ಚಳುವಳಿಯನ್ನು ಬಲವರ್ಧನೆಗೊಳಿಸುವುದಕ್ಕೆ ಸಂಬಂಧಿಸಿದ ವಿಷಯಗಳೊಂದಿಗೆ ಸಹಕಾರಿ ಸೊಸೈಟಿಗಳು ಸ್ವಾಯತ್ತವಾಗಿ ಕಾರ್ಯ ನಿರ್ವಹಿಸುವ ಸಲುವಾಗಿ ಉಪಬಂಧಿಸಿ ಸದರಿ ತಿದ್ದುಪಡಿಯನ್ನು ಆಜ್ಞಾಪಕಗೊಳಿಸಿದೆ. ಸಹಕಾರಿ ಸೊಸೈಟಿಯನ್ನು ರಚಿಸುವ ಹಕ್ಕು ಈಗ ಮೂಲಭೂತ ಹಕ್ಕಾಗಿರುವುದರಿಂದ ಮತ್ತು ಅದರ ಒಡೆತನವನ್ನು ಸಹಕಾರಿ ಸೊಸೈಟಿಯ ಪ್ರತಿಯೊಬ್ಬ ಸದಸ್ಯನು ಹೊಂದಿರುವುದರಿಂದ ಕೇಂದ್ರ ಸರ್ಕಾರವಾಗಲೀ ಅಥವಾ ರಾಜ್ಯ ಸರ್ಕಾರವಾಗಲೀ ಸಹಕಾರಿ ಸೊಸೈಟಿಗಳ ಆಡಳಿತದಲ್ಲಿ ಹಸ್ತಕ್ಷೇಪ ಮಾಡಲು ಸಾಧ್ಯವಾಗುವುದಿಲ್ಲ ಎಂಬುದಾಗಿಯೂ ನಿವೇದಿಸಿದ್ದಾರೆ. ವಾರದಲ್ಲಿ 24,000/– ರೂಪಾಯಿಗಳನ್ನು ಮಾತ್ರವೇ ಹಿಂಪಡೆಯುವುದಕ್ಕೆ ಪರಿಮಿತಿಯನ್ನು ವಿಧಿಸಿರುವುದರಿಂದ ಸಹಕಾರಿ ಸೊಸೈಟಿಗಳ ವಾಸ್ತವ ಕಾರ್ಯ ನಿರ್ವಹಣೆಗೆ ನಷ್ಟ ಉಂಟಾಗಿರುವುದನ್ನು ಅವರು ನಿವೇದಿಸಿದ್ದಾರೆ.

4. ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದ ಯಾವುದೇ ಕಾನೂನನ್ನು ಅಧಿನಿಯಮಿಸುವುದಕ್ಕೆ ಸಂಸತ್ತು ಸಕ್ಷಮವಾಗದಿರುವಾಗ, ಆ ಯಾವುದೇ ಉದ್ದೇಶವನ್ನು ನೋಡಿದ್ದಾಗ್ಯೂ ಕೇಂದ್ರ ಸರ್ಕಾರವು ತಂದಿರುವ ಈ ಮಹತ್ವದ ನಿರ್ಧಾರವಾಗಿರುವ ಹಣ ಹಿಂಪಡೆಯುವ ಮೊಬಲಗಿನ ಮೇಲೆ ವಿಧಿಸಿರುವ ನಿಯಂತ್ರಣವು ಸಹಕಾರಿ

ಸೊಸೈಟಿಗಳಿಗೆ ಅವಶ್ಯಕವಿರುವುದಿಲ್ಲ. ತಮ್ಮ ನಿವೇದನೆಗೆ ಪೂರಕವಾಗಿ ಮಾನ್ಯ ನ್ಯಾಯವಾದಿಗಳು ***ಧರಮ್‌ದತ್ ಮತ್ತು ಇತರರು –ವಿರುದ್ಧ– ಕೇಂದ್ರ ಸರ್ಕಾರ ಮತ್ತು ಇತರರು*** [1] ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯ ನೀಡಿದ ತೀರ್ಪನ್ನು ಉಲ್ಲೇಖಿಸಿರುವರು.

5. ಕ್ರಮ ಸಂಖ್ಯೆ 1 ಮತ್ತು 2 ರಲ್ಲಿರುವ ಪ್ರತಿವಾದಿಗಳು ನಿಗದಿಪಡಿಸಿದ ಹಿಂಪಡೆಯುವ ಮೊಬಲಗಿನ ಮೇಲೆ ನಿರ್ಬಂಧನೆಯು ಅವೈಜ್ಞಾನಿಕವಾದುದು ಮತ್ತು ಕಾರ್ಯ ಸಾಧ್ಯವಾದುದಲ್ಲ ಎಂಬುದಾಗಿ ಮಾನ್ಯ ನ್ಯಾಯವಾದಿಗಳು ನಿವೇದಿಸಿದ್ದಾರೆ. ಅವರು ಪ್ರತಿವಾದಿಗಳು ಸಹಕಾರಿ ಸಂಘಗಳನ್ನು ವ್ಯಕ್ತಿಗಳಿಗಿಂತ ಭಿನ್ನವಾಗಿ ಪರಿಗಣಿಸದಿರುವುದು ಸಮರ್ಥನೀಯವಲ್ಲ ಎಂಬುದಾಗಿ ನಿವೇದಿಸಿದ್ದಾರೆ. ಒಬ್ಬ ವ್ಯಕ್ತಿಗೆ ಒಂದು ವಾರಕ್ಕೆ 24,000/– ರೂಪಾಯಿಗಳನ್ನು ಹಿಂಪಡೆಯುವುದಕ್ಕೆ ಅನುಮತಿಸುವುದಾದಲ್ಲಿ, ಅದರಂತೆಯೇ ಸಹಕಾರಿ ಸೊಸೈಟಿಗಳಿಗೂ ಅದರ ಸದಸ್ಯರುಗಳ ಸಂಖ್ಯೆಯ ಅನುಪಾತದ ಪ್ರಮಾಣದಲ್ಲಿ ಮೊಬಲಗನ್ನು ಹಿಂಪಡೆಯಲು ಅನುಮತಿಸಬೇಕಾಗುತ್ತದೆ. ಅಂದರೆ ಒಂದು ಸಹಕಾರಿ ಸೊಸೈಟಿಯಲ್ಲಿ 20 ಸದಸ್ಯರಿದ್ದಾರೆ. ಆಗ ಸಹಕಾರಿ ಸೊಸೈಟಿಯಲ್ಲಿ 4,80,000/– ರೂಪಾಯಿಗಳನ್ನು [24,000 X 20] ಹಣವನ್ನು ಹಿಂಪಡೆಯುವುದಕ್ಕೆ ಅನುಮತಿಸತಕ್ಕದ್ದು ಎಂದು ನಿವೇದಿಸಿದ್ದಾರೆ. ವ್ಯಕ್ತಿಗಳನ್ನು ಮತ್ತು ಸಹಕಾರಿ ಸೊಸೈಟಿಗಳನ್ನು ಸರಿಸಮಾನವಾಗಿ ಪರಿಗಣಿಸಿರುವುದು ಒಂದೇ ಬುಟ್ಟಿಯಲ್ಲಿ ಕಿತ್ತಳೆ ಮತ್ತು ಬಾಳೆಹಣ್ಣುಗಳನ್ನು ಇಟ್ಟಂತೆ ಎಂದಿದ್ದಾರೆ.

6. ಅವರು, ಒಂದು ವಾರದಲ್ಲಿ ಖಾತೆದಾರನು 24,000/– ರೂಪಾಯಿಗಳನ್ನು ಮೀರದ ಮೊಬಲಗನ್ನು ಹಿಂಪಡೆಯಲು ವಿಧಿಸಿರುವ ನಿರ್ಬಂಧನೆಯು ಭಾರತದ ಸಂವಿಧಾನದ ಅನುಚ್ಛೇದ 19(4) ರಯುಕ್ತ ನಿರ್ಬಂಧನೆಯನ್ನು ಅನುಮತಿಸುವುದಿಲ್ಲವೆಂಬುದನ್ನು ಸಹ ನಿವೇದಿಸಿದ್ದಾರೆ. ಅದು ಭಾರತದ ಸಾರ್ವಭೌಮತ್ವ ಮತ್ತು ಅಖಂಡತೆಯ ಅಥವಾ ಸಾರ್ವಜನಿಕ ಸುವ್ಯವಸ್ಥೆ ಅಥವಾ

1. (2004) 1 ಸ.ನ್ಯಾ.ಮೊ. 712

ನೈತಿಕತೆಯ ಹಿತದೃಷ್ಟಿಯ ಸಂದರ್ಭದಲ್ಲಿ ಅಂಥ ನಿರ್ಬಂಧನೆಯನ್ನು ವಿಧಿಸಲು ಅದು ಹೇಳಿರುವುದಿಲ್ಲ. ಈ ಮೇಲೆ ನಮೂದಿಸಿದ ನಾಲ್ಕು ಅಂಶಗಳಲ್ಲಿ ಯಾವುದನ್ನು ಅನುಲಕ್ಷಿಸದಿರುವ ಆಕ್ಷೇಪಿತ ಅಧಿಸೂಚನೆಯನ್ನು ಅವರು ನನ್ನ ಗಮನಕ್ಕೆ ತಂದಿರುವರು. ಅವರು, ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದಂತಹ ಸಂವಿಧಾನದ ಏಳನೇ ಅನುಸೂಚಿಯಲ್ಲಿ ಪಟ್ಟಿ–II (ರಾಜ್ಯ ಪಟ್ಟಿ)ರಲ್ಲಿನ ನಮೂದು ಸಂಖ್ಯೆ 32ರಲ್ಲಿ ವಿಷಯಗಳನ್ನು ನಮೂದಿಸಿದೆಯೆಂದು ನಿವೇದಿಸಿದ್ದಾರೆ. ಆದುದರಿಂದ, ಸಹಕಾರಿ ಸೊಸೈಟಿಗಳಿಗೆ ಸಂಬಂಧಿಸಿದಂತೆ ಕಾನೂನು ರಚಿಸುವುದಕ್ಕೆ ಕೇಂದ್ರ ಸರ್ಕಾರಕ್ಕೆ ಅಧಿಕಾರ ಇರುವುದಿಲ್ಲವೆಂದೂ ಸಹಾ ನಿವೇದಿಸಿದ್ದಾರೆ.

7. ಪ್ರತಿವಾದಿ ಸಂಖ್ಯೆ 1ರ ಪರವಾಗಿ ಹಾಜರಾಗಿರುವ ಶ್ರೀ ಪಭುಲಿಂಗ ಕೆ. ನಾವಡಗಿ, ಮಾನ್ಯ ಹೆಚ್ಚುವರಿ ಸಾಲಿಸಿಟರ್ ಜನರಲ್‌ರವರು ಈ ಅರ್ಜಿಗಳ ಊರ್ಜಿತತೆ ಬಗ್ಗೆ ಆಕ್ಷೇಪಣೆಗಳನ್ನು ಎತ್ತಿದ್ದಾರೆ. ಅವರು ದಿನಾಂಕ 8.11.2016ರ ಅಧಿಸೂಚನೆಯನ್ನು ಸಾರ್ವಜನಿಕ ಹಿತಾಸಕ್ತಿ ಕಾನೂನು ವ್ಯವಹರಣೆಯಲ್ಲಿ (ಡಬ್ಲ್ಯೂ.ಪಿ.ಸಂಖ್ಯೆ 58157/2016) ಅದರ ಸಮಗ್ರತೆಯ ಬಗ್ಗೆ ಪ್ರಶ್ನಿಸಲಾಗಿದೆಯೆಂದು ನಿವೇದಿಸಿದ್ದಾರೆ. ಮಾನ್ಯ ವಿಭಾಗೀಯ ಪೀಠ, ದಿನಾಂಕ 11.11.2016ರ ತನ್ನ ಆದೇಶದ ಮೂಲಕ ಸದರಿ ಅರ್ಜಿಯನ್ನು ತಿರಸ್ಕರಿಸಿದೆ. ಈ ಅರ್ಜಿಗಳು ಭಾವಿತ ಪೂರ್ವನ್ಯಾಯದ ಸಿದ್ಧಾಂತವನ್ನು ಹಾನಿ ಮಾಡುವ ಅಂಶಗಳನ್ನು ಹೊಂದಿವೆಯೆಂದು ನಿವೇದಿಸಿದ್ದಾರೆ.

8. ಅವರು ವಾರದಲ್ಲಿ 20,000/– ರೂಪಾಯಿಗಳನ್ನು ಹಿಂಪಡೆಯುವುದಕ್ಕೆ ಇರುವ ಪರಿಮಿತಿಯೂ ತಾತ್ಕಾಲಿಕವಾದ ಮತ್ತು ಪ್ರಾಸಂಗಿಕವಾದ ಮಾನದಂಡವೆಂದು ನಿವೇದಿಸಿದ್ದಾರೆ. ಆಕ್ಷೇಪಿತ ಅಧಿಸೂಚನೆಯ ಖಂಡ 2(vi)ರಲ್ಲಿ ಹಿಂಪಡೆಯುವ ಹಣದ ಪರಿಮಿತಿಯನ್ನು ಪರಿಶೀಲಿಸಲಾಗುವುದೆಂದು ಅಧಿಸೂಚನೆಯಲ್ಲಿನ ವಿವರಣೆಯಲ್ಲಿನ ಹೇಳಿಕೆಯನ್ನು ನ್ಯಾಯಾಲಯದ ಗಮನಕ್ಕೆ ತಂದಿದ್ದಾರೆ. ತದನಂತರದಲ್ಲಿ ಎರಡನೇ ಪ್ರತಿವಾದಿಯಾಗಿರುವ ಭಾರತದ ರಿಸರ್ವ್ ಬ್ಯಾಂಕ್ ದಿನಾಂಕ 14.11.2016ರ

ತನ್ನ ಅಧಿಸೂಚನೆಯಲ್ಲಿ (ಅನುಬಂಧ–ಬಿ) ಜಿಲ್ಲಾ ಕೇಂದ್ರ ಸರ್ಕಾರದ ಸಹಕಾರಿ ಬ್ಯಾಂಕುಗಳಿಂದ ಪ್ರತಿವಾರ 24,000/– ರೂಪಾಯಿಗಳನ್ನು ಅದರ ಗ್ರಾಹಕನು ಪಡೆಯುವುದಕ್ಕೆ ಅಧಿಸೂಚನೆಯ ಮೂಲಕ ಅನುಮತಿಸಿದೆಯೆಂದೂ ಸಹಾ ನಿವೇದಿಸಿದ್ದಾರೆ.

9. ಅವರು, ಮೊಬಲಗನ್ನು ಹಿಂಪಡೆಯಲು ಇರುವ ನಿರ್ಬಂಧವು ಸಹಕಾರಿ ಸೊಸೈಟಿಗಳನ್ನು ಸ್ಥಾಪಿಸುವುದಕ್ಕೆ ಮತ್ತು ನಿರ್ವಹಿಸುವುದಕ್ಕೆ ಯಾರೊಬ್ಬರ ಹಕ್ಕಿಗೆ ಯಾವುವೇ ರೀತಿಯಲ್ಲೂ ಬಾಧಕವಾಗದೆಂದು ನಿವೇದಿಸಿದ್ದಾರೆ. ಅದಕ್ಕೆ ಪೂರಕವಾಗಿ ***ರಾಮ್ ಜೇಠ್‌ಮಲಾನಿ ಮತ್ತು ಇತರರು –ವಿರುದ್ಧ– ಕೇಂದ್ರ ಸರ್ಕಾರ ಮತ್ತು ಇತರರು*** [2] ಮೊಕದ್ದಮೆಯ ನಿರ್ಣಯವನ್ನು ಉಲ್ಲೇಖಿಸುತ್ತಾ ರಾಜ್ಯವು ಆರ್ಥಿಕತೆಯ ಮೇಲೆ ಸೂಕ್ತವಾದ ನಿಯಂತ್ರಣವನ್ನು ಚಲಾಯಿಸದಿದ್ದಲ್ಲಿ ಸಮಾಜವು ನಿರ್ಮೂಲವಾಗುತ್ತದೆಂದು ಅಭಿಪ್ರಾಯವನ್ನು ಉಲ್ಲೇಖಿಸಿರುತ್ತಾರೆ.

10. ಅಪೆಕ್ಸ್ ನ್ಯಾಯಾಲಯದಲ್ಲಿ ವರದಿಯಾಗಿರುವ ***ಬಜಾಜ್ ಹಿಂದೂಸ್ತಾನ್ ಲಿಮಿಟೆಡ್ –ವಿರುದ್ಧ– ಶ್ರೀ ಶಾದಿ ಲಾಲ್ ಎಂಟರ್‌ಪ್ರೈಸಸ್ ಲಿಮಿಟೆಡ್ ಮತ್ತು ಮತ್ತೊಬ್ಬರು*** [3] ಮೊಕದ್ದಮೆಯ ತೀರ್ಪನ್ನು ಅವಲಂಬಿಸಿ, ತಾಂತ್ರಿಕತೆ, ವಾಣಿಜ್ಯ ಮತ್ತು ವಿತ್ತೀಯ ವಿನಿಯಾಮಕ ಮಾನದಂಡಗಳಿಗೆ ಸಂಬಂಧಪಟ್ಟವುಗಳಿಗೆ ವಿಧಾನ ಮಂಡಲ ಅಥವಾ ಕಾರ್ಯಾಂಗ ರೂಪಿಸುವ ಕಾರ್ಯನೀತಿಯ ಪರಿಜ್ಞಾನ ಬಗೆಗೆ ನ್ಯಾಯಾಲಯಗಳು ಕೇವಲ ತೀರ್ಪುಗಳನ್ನು ನೀಡುವುದರಲ್ಲೇ ಮಗ್ನವಾಗಿರಬಾರದೆಂಬುದರ ಬಗೆಗೆ ನಿವೇದಿಸಿದ್ದಾರೆ.

11. ಅವರು, ಸರ್ಕಾರ ಹಿಂಪಡೆಯುವ ಹಣದ ಪರಿಮಿತಿಯನ್ನು ಪರಿಶೀಲಿಸುವುದಕ್ಕೆ ಮುಂಚೆ ಯಾವುದೇ ಕಪ್ಪು ಹಣವನ್ನು ಕಳ್ಳದಾರಿಯ ಮುಖಾಂತರ ಜನ–ಧನ ಖಾತೆಗಳಿಗೆ, ಬ್ಯಾಂಕೇತರ ಹಣಕಾಸು ಕಂಪನಿಗಳಿಗೆ, ಸೊಸೈಟಿಗಳಿಗೆ

2. (2011) 8 ಸ.ನ್ಯಾ.ಮೊ. 1

3. (2011) 1 ಎಸ್‌ಸಿಸಿ 640

ಮತ್ತು ಸಹಕಾರಿ ಸೊಸೈಟಿಗಳಿಗೆ ಹರಿದು ಬರುವ ಲೆಕ್ಕಗಳನ್ನು ಗಮನಕ್ಕೆ ತೆಗೆದುಕೊಂಡ ನಂತರವೆ ಸರ್ಕಾರ ಪರಿಶೀಲಿಸುವ ಬಗೆಗೆ ನಿವೇದಿಸಿದ್ದಾರೆ.

12. ಮಾನ್ಯ ನ್ಯಾಯವಾದಿಗಳ ನಿವೇದನೆಗಳಿಗೆ ನನ್ನ ವಿವೇಚನಾಯುಕ್ತ ಪರಿಗಣನೆಯನ್ನು ನೀಡಿರುತ್ತೇನೆ. ಅವರು, ಅರ್ಜಿದಾರರು, ರಿಟ್ ಅರ್ಜಿಯ ಕೋರಿಕೆಯ ಪ್ಯಾರಾಗ್ರಾಫ್ 5ರಲ್ಲಿ ವಿವೇಚನಾಯುಕ್ತ ನೋಟು ಅಮಾನ್ಯೀಕರಿಸುವ ಕಾರ್ಯನೀತಿಯನ್ನು ಶ್ಲಾಘಿಸಿರುವುದನ್ನು ನೋಡಬಹುದಾಗಿದೆ. ಕಪ್ಪು ಹಣವನ್ನು ನಿರ್ಮೂಲನೆ ಮಾಡುವುದಕ್ಕೆ ತೆಗೆದುಕೊಂಡ ಪ್ರಮುಖ ಉಪಕ್ರಮವಾಗಿರುವ ನೋಟು ಅಮಾನ್ಯೀಕರಣವು ಶ್ಲಾಘನೀಯವಾಗಿದೆ ಎಂದಿದ್ದಾರೆ ಎಂಬುದನ್ನು ರಿಟ್ ಅರ್ಜಿಯ ಕೋರಿಕೆಯ 7ನೇ ಪ್ಯಾರಾಗ್ರಾಫ್‌ನಲ್ಲಿ ನೋಟು ಅಮಾನ್ಯೀಕರಣದ ಯೋಜನೆಯನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿರುವರು. ಅವರು ಬ್ಯಾಂಕುಗಳಿಂದ ಹಣ ಹಿಂಪಡೆಯುವ ಮೊಬಲಗಿಗೆ ವಿಧಿಸಿರುವ ಪರಿಮಿತಿಗೆ ಮಾತ್ರವೇ ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿರುವರು. ಹಣ ಹಿಂಪಡೆಯಲು ನಿರ್ಬಂಧನೆ ಮತ್ತು ಖಾಯಂ ಆಧಾರದ ಮೇಲೆ ನಿಶ್ಚಿತಗೊಳಿಸಿರುವಂತಹುದ್ದಲ್ಲ. ಪ್ರಶ್ನಿತ ಅಧಿಸೂಚನೆಯ ಖಂಡ 2(vi)ರಲ್ಲಿಯೇ ಹಣ ಹಿಂಪಡೆಯುವ ಪರಿಮಿತಿಯನ್ನು ಪರಿಷ್ಕರಿಸಲಾಗುವುದೆಂದು ಉಲ್ಲೇಖಿಸಲಾಗಿದೆ. ಬ್ಯಾಂಕ್ ಖಾತೆದಾರರು ಕರೆನ್ಸಿ ನೋಟುಗಳ ಲಭ್ಯತೆಯನ್ನು ಮತ್ತು ಜಾರಿಯಾದ ಹೊಸ ಕರೆನ್ಸಿ ನೋಟುಗಳಿಗೆ ಎಟಿಎಂಗಳ ಮಾಪನಾಂಕವನ್ನು ಅವಲಂಬಿಸಿ ಅವರು ಹೆಚ್ಚು ಮೊಬಲಗಿನ ಹಣವನ್ನು ಹಿಂಪಡೆಯುವುದಕ್ಕೆ ಅನುಮತಿಸಲಾಗುತ್ತದೆ ಎಂದು ವಿವರಿಸಿರುತ್ತಾರೆ. ಮಾನ್ಯ ಹೆಚ್ಚುವರಿ ಸಾಲಿಸಿಟರ್ ಜನರಲ್‌ರವರು ಸಲ್ಲಿಸಿದ ನಿವೇದನೆಗಳಲ್ಲಿ ಹೇಳಿರುವಂತೆ ಕೇಂದ್ರ ಸರ್ಕಾರ ಕಪ್ಪು ಹಣವನ್ನು ದೃಷ್ಟಿಯಲ್ಲಿಟ್ಟುಕೊಂಡು ಅದು ಜನ್–ಧನ್ ಖಾತೆಗಳ ಬ್ಯಾಂಕೇತರ ಹಣಕಾಸು ಕಂಪನಿಗಳ ಸೊಸೈಟಿಗಳು, ಸಹಕಾರಿ ಸೊಸೈಟಿಗಳು ಇತ್ಯಾದಿಗಳಂತಹ ಮಾರ್ಗಗಳ ಮುಖಾಂತರ ಹರಿದುಬರುವಂತಹ ವಿಷಯವನ್ನು ಸಹ ಪರಿಶೀಲಿಸುತ್ತದೆ.

13. ಅರ್ಜಿದಾರರು ಈಗಾಗಲೇ ಸಂಖ್ಯೆ 1 ಮತ್ತು 2ರ ಪ್ರತ್ಯರ್ಜಿದಾರರಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಸಂಖ್ಯೆ 1 ಮತ್ತು 2ರ ಪ್ರತ್ಯರ್ಜಿದಾರರು ಪೂರ್ವಭಾವಿ

ಕಾರ್ಯವನ್ನು ನಿಯಂತ್ರಿಸುವ ಮತ್ತು ಹೊಣೆಗಾರಿಕೆಯ ವಿಧಾನದಲ್ಲಿ ಅರ್ಜಿದಾರರಿಂದ ಸ್ವೀಕರಿಸಿದ ಮನವಿಯನ್ನು ಪರಿಗಣಿಸಲು ಅದು ಬದ್ಧವಾಗಿದೆ. ಆದರೆ, ಈ ಸ್ವರೂಪದ ಪರಿಸ್ಥಿತಿಗಳಲ್ಲಿ ಭಾರತ ಸರ್ಕಾರ ಮತ್ತು ಭಾರತದ ರಿಸರ್ವ್ ಬ್ಯಾಂಕ್‌ಗೆ ನಿರ್ದೇಶನಗಳನ್ನು, ಆದಷ್ಟು ಕಡಿಮೆ ಕಾಲಬದ್ಧ ನಿರ್ದೇಶನಗಳನ್ನು ನೀಡಲಾಗುವುದಿಲ್ಲ. ಪ್ರಶ್ನಿತ ಅಧಿಸೂಚನೆಯನ್ನು ಅವಲೋಕಿಸಿದಾಗ ಭಾರತ ಸರ್ಕಾರ ಮತ್ತು ಭಾರತದ ರಿಸರ್ವ್ ಬ್ಯಾಂಕ್ ಖೋಟಾನೋಟುಗಳನ್ನು, ಕಪ್ಪು ಹಣವನ್ನು ಮತ್ತು ಭಯೋತ್ಪಾದನೆಯನ್ನು ನಿವಾರಿಸುವುದಕ್ಕಾಗಿಯೇ ಈ ನೋಟುಗಳ ಅಮಾನ್ಯೀಕರಣಗೊಳಿಸುವ ಯೋಜನೆಯನ್ನು ಜಾರಿಗೆ ತಂದಿರುವುದನ್ನು ಪ್ರಕಟಪಡಿಸುತ್ತದೆ. ಇಂತಹ ಶ್ಲಾಘನೀಯ ಉದ್ದೇಶಗಳನ್ನು ನಿರ್ದಿಷ್ಟ ನಿರ್ಬಂಧಗಳನ್ನು ವಿಧಿಸದ ಹೊರತು ಅದನ್ನು ಸಾಧಿಸಲು ಸಾಧ್ಯವಾಗುವುದಿಲ್ಲ. ಸಮಾಜದ ಒಟ್ಟಾರೆ ಹಿತಾಸಕ್ತಿಗಳಲ್ಲಿ ವ್ಯಾಪಕ ಕಾರ್ಯದೃಷ್ಟಿಯನ್ನು ಸಾಧಿಸುವಾಗ ಕೆಲ ವರ್ಗದ ಜನರ ಹಿತಾಸಕ್ತಿಗಳಿಗೆ ಬಾಧಕವುಂಟು ಮಾಡುವ ಸಲುವಾಗಿಯೇ ಬದಲಾವಣೆಯ ಕಾಲಾವಧಿಯ ನಿರ್ದಿಷ್ಟ ನಿಯಂತ್ರಕ ಮಾನದಂಡಗಳು ಬದ್ಧವಾಗಿವೆ. ಯಾವುದೇ ವರ್ಗದ ಮೇಲೆ ಪೂರಕ ಹಾನಿ, ಯಾವುದಾದರೂ ಆಗಿದ್ದರೆ ಅದು ಕನಿಷ್ಠತಮವಾದುದಾಗಿರುತ್ತದೆ. ಅದನ್ನು ತಪ್ಪಿಸಲು ಸಾಧ್ಯವಾಗುವುದಿಲ್ಲ. ಅವು ಯಾವುದೆ ವಿವಾದವಾಗುವುದಿಲ್ಲ. ಈ ವಿಷಯಗಳ ಸಂಬಂಧದಲ್ಲಿ ಭಾರತ ಸರ್ಕಾರ ಮತ್ತು ಭಾರತದ ರಿಸರ್ವ್ ಬ್ಯಾಂಕ್, ತೆಗೆದುಕೊಳ್ಳಬೇಕಾದ ಯಾವುದೇ ಕ್ರಮಗಳನ್ನು ಮತ್ತು ಯಾವ ನಿಗದಿತ ಕಾಲದೊಳಗೆ ತೆಗೆದುಕೊಳ್ಳಬೇಕಾದುದನ್ನು ನಿರ್ಧರಿಸುತ್ತವೆ.

14. ನಾನು, ಅರ್ಜಿದಾರರು ಬ್ಯಾಂಕುಗಳಿಂದ ಹಣ ಹಿಂಪಡೆಯುವ ಮೇಲೆ ಆಕ್ಷೇಪಿತ ನಿರ್ಬಂಧನೆಗಳು ಭಾರತದ ಸಂವಿಧಾನದ ಅನುಚ್ಛೇದ 19(1)(ಸಿ)ಯ ಉಲ್ಲಂಘನೆಯಾಗಿರುವ ಪರವಾಗಿ ಮಾಡಿದ ಸಲ್ಲಿಕೆಗಳನ್ನು ಅಂಗೀಕರಿಸುವುದಕ್ಕೆ ಸಹ ಒಪ್ಪಿಗೆ ನೀಡುವುದಿಲ್ಲ.

15. ಸಮಾಜಕ್ಕೆ ಈ ಕಪ್ಪು ಹಣ, ಖೋಟಾ ನೋಟು ಮತ್ತು ಭಯೋತ್ಪಾದನೆಯ ಹಾವಳಿಗಳೂ ಹಲವು ತಲೆಗಳ ಪೆಡಂಭೂತದ ಹಾವಾಗಿ

ಭಯ ಹುಟ್ಟಿಸುತ್ತಿವೆ. ಈ ಪೆಡಂಭೂತದ ಹಾವಿನ ಒಂದು ತಲೆಯನ್ನು ಕತ್ತರಿಸಿದಾಗ ಅದು ತನ್ನ ಮತ್ತೊಂದು ವಿಧ್ವಂಸಕ ತಲೆಯನ್ನು ಎದ್ದು ನಿಲ್ಲಿಸುತ್ತಿದೆ. ಅವುಗಳೆಲ್ಲವನ್ನು ಹೇಳ ಹೆಸರಿಲ್ಲದೆ ಹೊಸಕಿ ಹಾಕುವುದು ಬಹಳ ಶ್ರಮದಾಯಕ ಕಾರ್ಯವಾಗಿದೆ. ಅದು ಅಸಾಧ್ಯವಾದಾಗ ಮಾತ್ರವೇ ಮುಂದೆ ನಿರೀಕ್ಷಿತವಾದ ಕಠೋರತಮ ಮತ್ತು ಆಕಸ್ಮಿಕ ನಿಲುವುಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಕಾರ್ಯ ನೀತಿಯನ್ನು ಅನುಷ್ಠಾನಗೊಳಿಸುವ ದಾರಿಯಲ್ಲಿ ಕಠಿಣವಾದವುಗಳಿರುವಂತೆ ಮತ್ತು ಕಠಿಣತೆಗಳು ಇರುವಾಗ, ಅವಶ್ಯಕ ಪರಿಹಾರೋಪಾಯ ಮಾನದಂಡಗಳನ್ನು ತೆಗೆದುಕೊಳ್ಳಬೇಕಾಗುತ್ತದೆ.

16. ಅಪೆಕ್ಸ್ ನ್ಯಾಯಾಲಯ ವ್ಯಾಪಕ ಲಾಭದಾಯಕವಾದುದ್ದನ್ನು ಉಲ್ಲೇಖಿಸುತ್ತದೆ. ***ಬಾಲ್ಕೋ ನೌಕರರ ಒಕ್ಕೂಟ (ನೋಂದಣಿ) –ವಿರುದ್ಧ– ಕೇಂದ್ರ ಸರ್ಕಾರ ಮತ್ತು ಇತರರು*** [4] ಸಂಖ್ಯೆ 92 ಮತ್ತು 93ರ ಪ್ಯಾರಾಗ್ರಾಫ್‌ನಲ್ಲಿ ನೀಡಿದ ಅದರ ತೀರ್ಪು ಹೀಗಿದೆ:

> *"**92.** ಪ್ರಜಾಪ್ರಭುತ್ವದಲ್ಲಿ ಪ್ರತಿಯೊಂದು ಚುನಾಯಿತ ಸರ್ಕಾರ ತನ್ನದೇ ಸ್ವಂತವಾದ ಕಾರ್ಯನೀತಿಯನ್ನು ಅನುಸರಿಸುವುದಕ್ಕೆ ಅದು ವಿಶಿಷ್ಟಾಧಿಕಾರವನ್ನು ಹೊಂದಿರುತ್ತವೆ. ಸರ್ಕಾರದಲ್ಲಿ ಹಲವು ಬದಲಾವಣೆಗಳು, ದೃಷ್ಟಿಕೋನದ ಮಾರ್ಗಾಂತರದಲ್ಲಿ ಅಥವಾ ಆರ್ಥಿಕ ಕಾರ್ಯನೀತಿಗಳ ಬದಲಾವಣೆಯಲ್ಲಿ ಪರಿಣಾಮಗಳಾಗಬಹುದು. ಅಂಥ ಯಾವುದೇ ಬದಲಾವಣೆಯು ಕೆಲವೊಂದು ಪಟ್ಟಭದ್ರ ಹಿತಾಸಕ್ತಿಗಳಿಗೆ ಪ್ರತಿಕೂಲವಾಗಿ ಬಾಧಕವನ್ನುಂಟು ಮಾಡುವ ಪರಿಣಾಮವಾಗಬಹುದು. ಅದರಿಂದಲೇ ನ್ಯಾಯಾಲಯವು, ಕಾರ್ಯನೀತಿಯನ್ನು ಕಾರ್ಯಗತಗೊಳಿಸುವಾಗ ಯಾವುದೇ ಅಕ್ರಮತೆ ಅಥವಾ ಅದು ಕಾನೂನಿಗೆ ಪ್ರತಿಕೂಲವಾದದ್ದನ್ನು*

4. (2002)2 ಎಸ್‌ಸಿಸಿ 333

*ಅಥವಾ ದುರುದ್ದೇಶವನ್ನು ಎಸಗದ ಹೊರತು ಅದು ಬದಲಾವಣೆ ತರುವಂತಹ ನಿರ್ಣಯಗಳ ಕುರಿತು ಹಸ್ತಕ್ಷೇಪ ಮಾಡುವುದಿಲ್ಲ.*

***93.*** *ಆರ್ಥಿಕ ಕಾರ್ಯನೀತಿಗಳ ಜ್ಞಾನ ಮತ್ತು ಯುಕ್ತತೆಗಳು ಸಾಮಾನ್ಯವಾಗಿ ಯಾವುದೇ ಶಾಸನಬದ್ಧ ಉಪಬಂಧಗಳನ್ನು ಅಥವಾ ಭಾರತದ ಸಂವಿಧಾನವನ್ನು ಉಲ್ಲಂಘಿಸಿರುವುದು ಆ ಕಾರ್ಯನೀತಿಯ ಪ್ರಾತ್ಯಕ್ಷಿಕೆಗಳಾಗದ ಹೊರತು ಅದು ನ್ಯಾಯಾಂಗದ ಪರಿಶೀಲನೆಗೆ ಒಳಪಡುವುದಿಲ್ಲ. ಇತರ ದೃಷ್ಟಿಕೋನಗಳಲ್ಲಿ ಹೇಳುವುದಾದರೆ, ನ್ಯಾಯಾಲಯಗಳು ವಿವಿಧ ಆರ್ಥಿಕ ಕಾರ್ಯನೀತಿಗಳಿಗೆ ಸಂಬಂಧಿಸಿದ ಗುಣಾರ್ಹತೆಗಳನ್ನು ಪರಿಗಣಿಸುವುದಕ್ಕೆ ಮತ್ತು ಆ ಕಾರ್ಯನೀತಿಯ ಪ್ರಾಜ್ಞತೆಯನ್ನಾಗಲಿ ಅಥವಾ ಉತ್ತಮತೆ ಒಳಗೊಂಡಿರುವುದನ್ನು ಪರಿಗಣಿಸಲು ಅದಕ್ಕೆ ಸಾಧ್ಯವಾಗುವುದಿಲ್ಲ. ಕಾರ್ಯನೀತಿಯು ಸರಿತನವನ್ನು ಪರಿಶೀಲಿಸುವುದಕ್ಕಾಗಿಯೇ ಸಂಸತ್ತು ಯುಕ್ತ ವೇದಿಕೆಯಾಗಿದೆ ಮತ್ತು ನ್ಯಾಯಾಲಯಗಳು ಅದರ ವೇದಿಕೆಯಲ್ಲ. ಈ ಕಾರ್ಯನೀತಿಯನ್ನು ಲೋಕಸಭಾವು ಪರಿಶೀಲಿಸಿತು ಮತ್ತು ದಿನಾಂಕ 1.3.2001ರಲ್ಲಿ ಈ ನಿಲುವಳಿಗೆ ಸೋಲುಂಟಾಯಿತು".*

17. ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವರದಿ ಮಾಡಿರುವ ***ಇಂಡಿಯಾ ಸಿಮೆಂಟ್ ಲಿಮಿಟೆಡ್ ಮತ್ತು ಇತರರು –ವಿರುದ್ಧ– ಕೇಂದ್ರ ಸರ್ಕಾರ ಮತ್ತು ಇತರರು*** [5] ಮೊಕದ್ದಮೆಯಲ್ಲಿ ಸರ್ಕಾರದ ಕಾರ್ಯನೀತಿಯ ರಚನೆ ಮತ್ತು ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಕೆಲವು ವ್ಯಕ್ತಿಗಳು ಅನಾನುಕೂಲತೆ ಮತ್ತು ನಷ್ಟಗಳಿಂದ

5. 1990(4) ಎಸ್‌ಸಿಸಿ 356

ಬಾಧಿತರಾದರೆ, ಅದಕ್ಕೆ ನ್ಯಾಯಾಲಯವು ಹಸ್ತಕ್ಷೇಪ ಮಾಡುವ ಸಂಬಂಧದಲ್ಲಿ ಅದು ಪರ್ಯಾಪ್ತ ಕಾರಣವಾಗುವುದಿಲ್ಲವೆಂದು ಸರ್ವೋಚ್ಚ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

18. ಆಡಳಿತಗಾರರು ಮತ್ತು ಶಾಸಕರು ಸಾರ್ವಜನಿಕ ಹಿತಾಸಕ್ತಿಯನ್ನು ಅವಶ್ಯಕವಾಗಿ ಗಮನದಲ್ಲಿಟ್ಟುಕೊಂಡು ಅದರಂತೆ ಅವರು ಕಾರ್ಯನೀತಿಗಳನ್ನು ರೂಪಿಸುವುದಕ್ಕೆ ಮತ್ತು ಅಂಥ ಆಡಳಿತಾತ್ಮಕ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಹಕ್ಕುಳ್ಳವರಾಗಿರುತ್ತಾರೆ. ನ್ಯಾಯಾಲಯಗಳು, ಸಾಮಾನ್ಯವಾಗಿ ಕಾರ್ಯನೀತಿಗಳ ನಿರ್ಣಯಗಳಲ್ಲಿ ಅಕ್ರಮತೆ ಮತ್ತು ಸ್ವೇಚ್ಛಾಚಾರವು ಸ್ಪಷ್ಟವಾಗದ ಹೊರತು ಅವು ಹಸ್ತಕ್ಷೇಪ ಮಾಡುವುದಿಲ್ಲ. ಈ ಸಂಬಂಧದಲ್ಲಿ, ನಾನು, (ಮೇಲಿನ) ***ಬಜಾಜ್ ಹಿಂದೂಸ್ತಾನ್ ಲಿಮಿಟೆಡ್*** ಮೊಕದ್ದಮೆಯಲ್ಲಿ ಅಪೆಕ್ಸ್ ನ್ಯಾಯಾಲಯವು ತನ್ನ ನಿರ್ಣಯವನ್ನು ಸಂಖ್ಯೆ 45 ಮತ್ತು 46ನೇ ಪ್ಯಾರಾಗ್ರಾಫ್‌ಗಳಲ್ಲಿ ವ್ಯಕ್ತಪಡಿಸಿರುವುದನ್ನು ಇಲ್ಲಿ ಉಪಯುಕ್ತವಾಗಿ ಉಲ್ಲೇಖಿಸಬಹುದಾಗಿದೆ.

> *"**45.** ನಮ್ಮ ಅಭಿಪ್ರಾಯದಲ್ಲಿ ವಿತ್ತೀಯ ಮತ್ತು ಆರ್ಥಿಕ ವಿನಿಯಾಮಕ ಮಾನದಂಡಗಳಲ್ಲಿ ನ್ಯಾಯಿಕ ನಿರ್ಬಂಧನೆಗಳು ಇರತಕ್ಕದ್ದು. ಅಂಥ ಮಾನದಂಡಗಳಲ್ಲಿ ಅಕ್ರಮತೆ ಅಥವಾ ಅಸಂವಿಧಾನಾತ್ಮಕವಾಗಿರುವುದು ಸ್ಪಷ್ಟವಾಗದ ಹೊರತು ನ್ಯಾಯಾಲಯವು ಸರ್ಕಾರವನ್ನು ಅಂಥ ಮಾನದಂಡಗಳನ್ನು ಮಾಡದಂತೆ ತಡೆಯತಕ್ಕದ್ದಲ್ಲ. ಆರ್ಥಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿನ ಎಲ್ಲ ಆಡಳಿತಾತ್ಮಕ ನಿರ್ಣಯಗಳು ಅತ್ಯವಶ್ಯಕ ತದಾರ್ಥವಾಗಿರುತ್ತದೆ ಮತ್ತು ಪ್ರಾಯೋಗಿಕವಾಗಿರುತ್ತದೆ. ಆದುದರಿಂದ ಆರ್ಥಿಕ ವಿಷಯಗಳು ವಿಭಿನ್ನ ಸಾಮಾಜಿಕ ಸನ್ನಿವೇಶಗಳನ್ನು ವಿಶೇಷವಾಗಿ ನಿರ್ವಹಿಸುವುದಕ್ಕೆ ಸಂಬಂಧಿಸಿದಂತೆ ಉಂಟಾಗುವ*

*ಅನಿವಾರ್ಯತೆಗಳು ಅತ್ಯಂತ ಜಟಿಲವಾಗಿರುತ್ತದೆ. ಆದುದರಿಂದ ಸರ್ಕಾರ ವಿತ್ತೀಯ ವಿನಿಯಾಮಕ ಮಾನದಂಡಗಳನ್ನು ಯೋಜಿತ ಕ್ರಮಗಳಲ್ಲಿ ಮತ್ತು ಸಾಧನಗಳಲ್ಲಿ ರೂಪಿಸಬೇಕಾಗುತ್ತದೆ ಮತ್ತು ನ್ಯಾಯಾಲಯವು ಈ ಕ್ಷೇತ್ರದೊಳಗಿನ ಶಾಸನಗಳು ಅಥವಾ ರಚನೆಗಳು, ಅತಿಕ್ರಮಣವನ್ನು ಒತ್ತಾಯಿಸದ ಹೊರತು ಅವುಗಳನ್ನು ಹಸ್ತಕ್ಷೇಪ ಮಾಡತಕ್ಕದ್ದಲ್ಲ.*

**46**. ನಮ್ಮ ಅಭಿಪ್ರಾಯದಲ್ಲಿ, ಕಾರ್ಯ ನೀತಿಯನ್ನು ವಿಧಾನಮಂಡಲವಾಗಲೀ ಅಥವಾ ಕಾರ್ಯ ನಿರ್ವಾಹಕಗಳಾಗಲಿ ರೂಪಿಸಿದ್ದರೆ, ಅದರಲ್ಲಿ ಯಾವುದೇ ವ್ಯತ್ಯಾಸವಿರುವುದಿಲ್ಲ ಮತ್ತು ಅದರಲ್ಲಿ ನ್ಯಾಯಿಕ ನಿರ್ಬಂಧವಿರತಕ್ಕದ್ದು. ನ್ಯಾಯಾಲಯವು, ಶಾಸನ ಅಥವಾ ರಚನೆಯ ಕೆಲ ಉಪಬಂಧಗಳನ್ನು ಸ್ಪಷ್ಟವಾಗಿ ಉಲ್ಲಂಘಿಸಿದಾಗ ಅಥವಾ ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟು ಮಾಡಿದಾಗ ಮಾತ್ರವೇ ಕಾರ್ಯನೀತಿಯ ಕಾರ್ಯ ನಿರ್ವಹಣೆಯನ್ನು ಅಸಿಂಧುಗೊಳಿಸತಕ್ಕದ್ದು".

19. ***ಪತಾನ್ ಮೊಹಮ್ಮದ್ ಸುಲೇಮಾನ್ ರೆಹಮತ್‌ಖಾನ್–ವಿರುದ್ಧ– ಗುಜರಾತ್ ಸರ್ಕಾರ ಮತ್ತು ಇತರರು*** [6] ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮತ್ತೊಂದು ಮೊಕದ್ದಮೆಯನ್ನು ಉಲ್ಲೇಖಿಸುವುದು ಸಹ ಮತ್ತಷ್ಟು ಸಹಕಾರಿಯಾಗುತ್ತದೆ. ಈ ಮೊಕದ್ದಮೆಯಲ್ಲಿ, ಸರ್ಕಾರ ಸಾರ್ವಜನಿಕ ಹಿತಾಸಕ್ತಿಯನ್ನು ಗಮನದಲ್ಲಿಟ್ಟುಕೊಂಡು ಯುಕ್ತ ಹಣಕಾಸು ಕಾರ್ಯ ನೀತಿಯನ್ನು ತುರ್ತು ಸನ್ನಿವೇಶಗಳ, ಮಾರ್ಗ ಸೂಚನೆಗಳನ್ನು ಅವಲಂಬಿಸಿ ಆರ್ಥಿಕತೆ ಮತ್ತು ವ್ಯವಸ್ಥಾಪನೆಗೆ ನಿರ್ಣಯಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರ ಮತ್ತು ಅದರ ಸಾಧನಗಳು

6. (2014)4 ಎಸ್‌ಸಿಸಿ 156

ಯಾವಾಗಲೂ ಮುಕ್ತವಾಗಿರುತ್ತವೆ. ಸರ್ಕಾರವು ತೆಗೆದುಕೊಂಡ ಪ್ರತಿಯೊಂದು ನಿರ್ಣಯವನ್ನು ಅತೀ ಸೂಕ್ಷ್ಮವಾದ ಮತ್ತು ಸಂಶಯಾತ್ಮಕವಾದ ಕಣ್ಣಿನಿಂದ ಪರೀಕ್ಷಿಸುವುದರಿಂದ ಆಡಳಿತ ಯಂತ್ರವು ನಿಶ್ಚಲವಾಗಿ ನಿಂತುಬಿಡುತ್ತದೆ ಮತ್ತು ಆಡಳಿತಗಾರರು ತಮ್ಮೆಲ್ಲ ಉಪಕ್ರಮಗಳಲ್ಲಿ ಮತ್ತು ಕ್ರಿಯಾಶೀಲ ಕಾರ್ಯ ಚಟುವಟಿಕೆಗಳಲ್ಲಿ ವಿಫಲತೆಯನ್ನು ಅನುಭವಿಸಬೇಕಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

20. ದಿನಾಂಕ 8.11.2016 (ಅನುಬಂಧ–ಎ) ಅಧಿಸೂಚನೆಯ ಖಂಡ 2(vi)ಕ್ಕೆ, ದಿನಾಂಕ 14.11.2016ರ ಸುತ್ತೋಲೆಗೆ ಮತ್ತು 21.11.2016 (ಅನುಕ್ರಮವಾಗಿ ಅನುಬಂಧ ಬಿ ಮತ್ತು ಸಿ) ಸಲ್ಲಿಸಿದ ಆಕ್ಷೇಪಣೆಗಳು ವಿಫಲವಾಗಿದೆ. ತತ್ಪರಿಣಾಮವಾಗಿ (ii) ಮತ್ತು (iii) ವಿನಂತಿಗಳನ್ನು ಸಮ್ಮತಿಸಲು ಸಾಧ್ಯವಿಲ್ಲ.

21. ಈ ರಿಟ್ ಅರ್ಜಿಯನ್ನು ಮೇಲೆ ಹೇಳಲಾದ ಅಭಿಪ್ರಾಯಗಳಿಗೊಳಪಟ್ಟು ವಜಾ ಮಾಡಲಾಗಿದೆ. ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶ ಇರುವುದಿಲ್ಲ.